ಒಂದನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:237/2021

ಪಿರ್ಯಾದಿ : ಬಿಳಿಗೆರೆ ಪೋಲಿಸರು

ವಿರುದ್ಧ

ಆರೋಪಿತರು :

1 ನಾಗೇಶ, ಬಿನ್. ಮೈಸೂರು ಮಹದೇವ , 29 ವರ್ಷ
2 ರಾಜೇಶ , ಬಿನ್.ಮೈಸೂರು ಮಹದೇವ , 28 ವರ್ಷ
3 ಕೃಷ್ಣ , ಬಿನ್.ಮೈಸೂರು ಮಹದೇವ , 23 ವರ್ಷ
4 ಮೈಸೂರು ಮಹದೇವ ಬಿನ್.ಲೇ.ಕೆಂಡಯ್ಯ, 55 ವರ್ಷ
5 ಜಯಮ್ಮ ಕೋಂ.ಮೈಸೂರು ಮಹದೇವ , 48 ವರ್ಷ

ಎಲ್ಲರ ವಾಸ: ಬಿಳುಗಲಿ ಗ್ರಾಮ, ನಂಜನಗೂಡು ತಾಲ್ಲೂಕು

## ದೋಷಾರೋಪಣೆ

ಶ್ರೀ ಕಿಶೋರ್ ಕುಮಾರ್ ಎಂ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿ:**23.12.2020** ರಂದು ರಾತ್ರಿ **08.30** ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಬಿಳುಗಲಿ ಗ್ರಾಮದ ಪರಿಶಿಷ್ಟ ಜನಾಂಗದ ಬೀದಿಯಲ್ಲಿ ಹಾದು ಹೋಗಿರುವ ಹುಲ್ಲಹಳ್ಳಿ ನಾಲೆಯ ಸೇತುವೆಯ ಮುಂಭಾಗ ಸಿದ್ದಯ್ಯನವರ ಮನೆಯ ಮುಂದೆ ರಸ್ತೆಯಲ್ಲಿ ಚಾಸಾ.**1** ರವರು **1** ನೇ **ಆರೋಪಿಗೆ** ಏಕೆ ನನ್ನ ಮಗ ಚಾಸಾ.**5** ರವರಿಗೆ ಸಂಜೆ **6** ಗಂಟೆ ಸಮಯದಲ್ಲಿ ಬೈಯ್ದಿಯಂತೆ ಎಂದು ಕೇಳಿದ ವಿಚಾರದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ **1** ನೇ **ಆರೋಪಿತರಾದ ನೀವು ಹಳೇ ದ್ವೇಷದಿಂದ ತೀಟೆ ಜಗಳ ತೆಗೆದು ಇಟ್ಟಿಗೆಯಿಂದ** ಚಾಸಾ.**1** ರವರ ತಲೆಯ ಮುಂಭಾಗಕ್ಕೆ ಹೊಡೆದಿರುತ್ತೀರಿ, ಜಗಳ ಬಿಡಿಸಲು ಬಂದ ಚಾಸಾ.**2** ರವರಿಗೆ **3** ನೇ **ಆರೋಪಿತರಾದ ನೀವು** ಇಟ್ಟಿಗೆಯಿಂದ ಬಲ ಮೊಣಕೈಗೆ ಹೊಡೆದಿರುತ್ತೀರಿ, **3** ನೇ **ಆರೋಪಿತರಾದ ನೀವು ಚಾಸಾ.3 ರವರಿಗೆ**

ಮಚ್ಚಿನಿಂದ ತಲೆಯ ಮಂಭಾಗ ಹಣೆಗೆ ಹೊಡೆದಿರುತ್ತೀರಿ, 1ನೇ ಆರೋಪಿತರಾದ ನೀವು ಚಾಸಾ.4 ರವರಿಗೆ ಕೊಡಲಿಯಿಂದ ಎಡಕಿವಿಗೆ ಹೊಡೆದಿರುತ್ತೀರಿ ಮತ್ತು ಚಾಸಾ.5 ರವರಿಗೆ 1ನೇ ಆರೋಪಿತರಾದ ನೀವು ಕಲ್ಲಿನಿಂದ ತಲೆಯ ಮುಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು, ಭಾರತ ದಂಡ ಸಂಹಿತೆಯ ಕಲಂ.**324** **ಸಹವಾಚಕ ಕಲಂ.34** ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 2 ನೇ ಆರೋಪಿತನು ಚಾಸಾ.1 ರವರ ಬಲಕೈಗೆ ಕಚ್ಚಿ, ನಂತರ ಉಳಿದ ಆರೋಪಿತರುಗಳು ಕೈಗಳಿಂದ ಮೈಕೈಗೆ, ಬಲಭುಜಕ್ಕೆ ಗುದ್ದಿರುತ್ತೀರಿ, 4 ನೇ ಆರೋಪಿತರಾದ ನೀವು ಚಾಸಾ.3 ರವರಿಗೆ ಕೆಳಗೆ ಕೆಡವಿ ಕಾಲು ಹಿಡಿದು ಎಳೆದಾಡಿರುತ್ತೀರಿ, 3 ನೇ ಆರೋಪಿತರಾದ ನೀವು ಚಾಸಾ.5 ರವರಿಗೆ ಕೈಯಿಂದ ಮೈಕೈಗೆ ಗುದ್ದಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು, ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 5 ನೇ ಆರೋಪಿತರಾದ ನೀವು 1 ರಿಂದ 4 ನೇ ಆರೋಪಿತರಿಗೆ ಕೃತ್ಯವನ್ನು ಎಸಗಲು ಕುಮ್ಮಕ್ಕು ನೀಡಿ ದುಷ್ಪ್ರೇರಣೆ ಮಾಡಿರುತ್ತೀರಿ. ಆದ್ದರಿಂದ 5 ನೇ ಆರೋಪಿತರಾದ ನೀವು, ಭಾರತ ದಂಡ ಸಂಹಿತೆಯ ಕಲಂ.114 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 5 ನೇ ಆರೋಪಿತರಾದ ನೀವು ಚಾಸಾ.1 ರಿಂದ 5 ರವರಿಗೆ ಇವರನ್ನು ಬಿಡಬೇಡಿ ಮುಂದೆ ಏನಾಗುತ್ತೋ ನೋಡಿ ಬಿಡೋಣ ಇವರನ್ನು ಮುಗಿಸಿಬಿಡಿ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ

ಭಯೋತ್ಪಾದನೆಯನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು, ಭಾರತ ದಂಡ ಸಂಹಿತೆಯ ಕಲಂ.506 ಸಹವಾಚಕ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಐದನೆಯದಾಗಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆರೋಪಿತರು ಚಾಸಾ.1 ರಿಂದ 5 ರವರಿಗೆ ಅವಾಚ್ಯವಾಗಿ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 3 ನೇ ಆರೋಪಿಯು ಚಾಸಾ.2 ರವರ ಮಾನಕ್ಕೆ ಕುಂದುಂಟು ಮಾಡುವ ಉದ್ದೇಶದಿಂದ ಚಾಸಾ.2 ರವರ ಬಟ್ಟೆಯನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾನೆ. ಆರೋಪಿತರು ಚಾಸಾ.2 ರವರ ಮಾನಕ್ಕೆ ಕುಂದುಂಟು ಮಾಡುವ ಉದ್ದೇಶದಿಂದ ಅವರ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿರುತ್ತಾರೆ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.354 ಸಹವಾಚಕ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿತರು ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 29.07.2024 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

ದಿನಾಂಕ:29.07.2024

1 ನೇ ಹೆ.ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

ಒಂದನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,

<u>ಸಿ.ಸಿ.ಸಂಖ್ಯೆ:237/2021</u>

ಪಿರ್ಯಾದಿ : ಬಿಳಿಗೆರೆ ಪೋಲಿಸರು

ವಿರುದ್ಧ

ಆರೋಪಿತರು :

1 ನಾಗೇಶ, ಬಿನ್. ಮೈಸೂರು ಮಹದೇವ , 29 ವರ್ಷ
2 ರಾಜೇಶ , ಬಿನ್.ಮೈಸೂರು ಮಹದೇವ , 28 ವರ್ಷ
3 ಕೃಷ್ಣ , ಬಿನ್.ಮೈಸೂರು ಮಹದೇವ , 23 ವರ್ಷ
4 ಮೈಸೂರು ಮಹದೇವ ಬಿನ್.ಲೇ.ಕೆಂಡಯ್ಯ, 55 ವರ್ಷ
5 ಜಯಮ್ಮ ಕೋಂ.ಮೈಸೂರು ಮಹದೇವ , 48 ವರ್ಷ

ಎಲ್ಲರ ವಾಸ: ಬಿಳುಗಲಿ ಗ್ರಾಮ, ನಂಜನಗೂಡು ತಾಲ್ಲೂಕು

: ಆಪಾದನೆ :

ಪ್ರಶ್ನೆ-1 : ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?

ಉತ್ತರ :

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರ :

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು